ಪ್ರಕಟವಾಗಿದೆ. ಅಸ್ಪೃಶ್ಯ ಗುಲಾಮನೆದುರು ಕ್ರಿಶ್ಚಿಯನ್ ಭೂಮಾಲೀಕನೊಬ್ಬ ತನ್ನ ಮನಸ್ಸನ್ನು ಪರಿವರ್ತಿಸಿಕೊಳ್ಳುವುದರ ಸುತ್ತ ಅದರ ಕತೆ ಇದೆ. ಆದರೆ, ಕಾದಂಬರಿಯ ಲಕ್ಷಣಗಳಿಲ್ಲವೆಂದು ಅದನ್ನು ಬಹಳಷ್ಟು ಸಾಹಿತ್ಯ ಚರಿತ್ರಾಕಾರರು ಗುರುತಿಸುವುದಿಲ್ಲ. 1893ರಲ್ಲಿ ಪೋಥೇರಿ ಕುನ್ಹಂಬು ಎಂಬುವರು 'ಸರಸ್ವತಿ ವಿಜಯಂ' ಎಂಬ ಕಾದಂಬರಿ ಬರೆದಿದ್ದು, ಇದೂ ಕೂಡ ಕೆಳ ಜಾತಿಯ ವಸ್ತುವನ್ನೊಳಗೊಂಡಿರುವಂತಹದ್ದು. 1897ರಲ್ಲಿ ಜೋಸೆಫ್ ಮುಲಿಯಿಲ್ 'ಸುಕುಮಾರಿ' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಇದೂ ಕೆಳಜಾತಿಯ ವಸ್ತುವನ್ನೊಳಗೊಂಡು ಬರೆಯಲಾದ ಕಾದಂಬರಿ. ಹತ್ತೊಂಬತ್ತನೇ ಶತಮಾನದ ಕೆಳಜಾತಿಯ ಮಲಯಾಳಂ ಕಾದಂಬರಿಗಳೆಂದು ದಿಲೀಪ್ ಎಂ. ಮೆನನ್ ಈ ಮೂರೂ ಕಾದಂಬರಿಗಳನ್ನು ಅಧ್ಯಯನ ಮಾಡಿದ್ದಾರೆ. ಅನುವಾದಕ ಮೋಹನ್ ಕುಂಟಾರ್ ಕೂಡ ಮಲಯಾಳಂ ಮೊದಲ ಕಾದಂಬರಿ 'ಕುಂದಲತ' ಎಂದು ಹಲವಾರು ಆಧಾರಗಳ ಸಮೇತ ಚರ್ಚಿಸಿದ್ದಾರೆ.

ಅಪ್ಪುನೆಡುಜಾಡಿ ಅವರು (1862–1933) ಮಲಯಾಳಂ ಭಾಷೆಯಲ್ಲಿ ಮೊದಲ ಕಾದಂಬರಿ ಬರೆದವರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಬಗ್ಗೆ ಚರ್ಚೆಗಳಿವೆ. ಇವರು ಅಧ್ಯಾಪಕರಾಗಿ, ಶಿಕ್ಷಣ ತಜ್ಞರಾಗಿ, ಸಹಕಾರಿ ಕ್ಷೇತ್ರದ ಧುರೀಣರಾಗಿ, ಪತ್ರಕರ್ತರಾಗಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆ ಮಾಡಿದ್ದಾರೆ. ಇವರು ಬರೆದದ್ದು ಒಂದೇ ಕೃತಿಯಾದರೂ ಮಲಯಾಳಂ ಸಾಹಿತ್ಯ ಚರಿತ್ರೆಯಲ್ಲಿ ಇದಕ್ಕೊಂದು ಪ್ರಮುಖವಾದ ಸ್ಥಾನವಿದೆ.

ಅಪ್ಪುನೆಡುಜಾಡಿ ಅವರು ಮೊದಲ ಮುದ್ರಣದ ಮುನ್ನುಡಿಯಲ್ಲಿ ಬರೆದಿರುವ ಮಾತುಗಳು ಈ ಕಾದಂಬರಿಯ ಪ್ರವೇಶಕ್ಕೆ ಹಲವು ದಾರಿಗಳನ್ನು ಒದಗಿಸಿಕೊಡುತ್ತವೆ. ಜೊತೆಗೆ ಭಾರತೀಯ ಸಂದರ್ಭದಲ್ಲಿ ಕಾದಂಬರಿ ಪ್ರಕಾರದ ಉಗಮದ ಬಗ್ಗೆಯೂ ಕೆಲವು ಮಾಹಿತಿಗಳು ದೊರೆಯುತ್ತವೆ. 'ಇಂಗ್ಲಿಷಿನಲ್ಲಿ ಹೊಸ ಮಾದರಿ ಕತೆ ಎಂಬರ್ಥದಲ್ಲಿ 'ನಾವೆಲ್' ಎಂದು ಹೇಳಲಾಗುವ, ಓದುಗರು ಹೊತ್ತು ಕಳೆಯಲು ಓದುವ ತುಂಬಾ ಪುಸ್ತಕಗಳಿವೆ. ಮಲಯಾಳಂ ಭಾಷೆಯಲ್ಲಿ ಅಂತಹ ಪುಸ್ತಕಗಳು ಇಲ್ಲದೆ ಇರುವುದರಿಂದ ಮಲಯಾಳಿಗರಲ್ಲಿ ಇಂಗ್ಲಿಷ್ (ಪರಿಜ್ಞಾನ) ತಿಳಿವಳಿಕೆಯಿಲ್ಲದವರಾದ ಹೆಚ್ಚಿನ ಜನರಿಗೆ ಈ ಬಗೆಯ ಪುಸ್ತಕಗಳ ಕಥಾ ಸ್ವಾರಸ್ಯವನ್ನು, ಭಾಷಾ ಚಾತುರ್ಯವನ್ನು ಲೇಶವಾದರೂ ತಿಳಿದುಕೊಳ್ಳಲು ಸಾಧ್ಯವಾಗದೆ, ಚಿಕ್ಕಂದಿನಲ್ಲಿ ತಾಯಿ ತಂದೆಯರು ಹೇಳಿ ತಿಳಿದಿರುವ ಕೆಲವು ಪುರಾಣ ಕತೆಗಳನ್ನು ರಾಮಾಯಣ, ಮಹಾಭಾರತ, ನಳಚರಿತೆ ಮೊದಲಾದವುಗಳನ್ನು ಸಂಕ್ಷಿಪ್ತವಾಗಿ ಕೆಲವು ಪುಸ್ತಕಗಳಿಂದ ಓದಿ ತಿಳಿದು, ಅವುಗಳನ್ನೇ ಚರ್ವಿತ ಚರ್ವಿಣ ಮಾಡುತ್ತಾ, ಸ್ವಲ್ಪವೂ ಸ್ವಾರಸ್ಯವಿಲ್ಲದೆ ಮತ್ತೆಮತ್ತೆ ಹಲವರು ಪುನರಾವರ್ತಿಸಿಕೊಂಡು ಕಾಲ ಕಳೆಯುತ್ತಿರುವುದು ತುಂಬಾ ಕಷ್ಟವೇ. ಇಂಗ್ಲಿಷ್ ಭಾಷಾ ತಿಳಿವಳಿಕೆ ಹಾಗೂ ಅದನ್ನು ಕರಗತ ಮಾಡಿಕೊಂಡ ಅಪೂರ್ವರಾದ ಕೆಲವು ಕೇರಳೀಯರು ಇದುವರೆಗೆ ಆ ಪರಿಸ್ಥಿತಿಯನ್ನು ಬದಲಾಯಿಸಲು ಶ್ರಮಿಸದೆ ಇರುವುದು ಆಶ್ಚರ್ಯವೇ.' ಈ ಮಾತುಗಳು ಕೇವಲ ಮಲಯಾಳಂ ಸಾಹಿತ್ಯಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಭಾರತದ ಎಲ್ಲಾ ದೇಶೀಯ ಭಾಷೆಗಳಿಗೂ ಸ್ವಲ್ಪ ಮಟ್ಟಿಗೆ ಅನ್ವಯಿಸುತ್ತವೆ. ಆದರೆ, ಇಂದು ಕಾದಂಬರಿ ಕೇವಲ ಹೊತ್ತು ಕಳೆಯಲು ರಚನೆಯಾಗುತ್ತಿರುವ ಪ್ರಕಾರವಲ್ಲ. ಅದಕ್ಕೊಂದು ವಿಶಾಲ ವ್ಯಾಪ್ತಿ ಬಂದಿದೆ, ಜೊತೆಗೆ ಸಾಂಸ್ಕೃತಿಕ ಮಹತ್ವವೂ ಇದೆ. 'ಕುಂದಲತ' ಕಾದಂಬರಿಯ ಕತೆಯ ಸ್ಥೂಲವಾದ ಹಂದರವನ್ನು ಗಮನಿಸಬಹುದು. ಕಳಿಂಗದ ರಾಜ ಚಿತ್ರರಥ; ಇವನಿಗೆ ಕಪಿಲನಾಥ ಎಂಬ ಮಂತ್ರಿಯಿರುತ್ತಾನೆ. ಇವನ ಬಗ್ಗೆ ಬಂದ ಸುಳ್ಳು ದೂರನ್ನು ನಂಬಿ ರಾಜನು ಶಿಕ್ಷೆ ವಿಧಿಸುತ್ತಾನೆ. ರಾಜನ ಚಿಕ್ಕ ಹೆಣ್ಣುಮಗುವನ್ನು ಅಪಹರಿಸಿ, ಅದು ಸತ್ತಿರುವುದಾಗಿ ಸಾಕ್ಷ್ಯ ಬಿಟ್ಟು, ಮಗುವಿನೊಂದಿಗೆ ಕಾಡಿನ ಬೆಟ್ಟದ ಮೇಲೆ ಆಶ್ರಮದ ರೀತಿ ವಾಸಸ್ಥಳವನ್ನು ನಿರ್ಮಿಸಿಕೊಂಡು, ಯೋಗೀಶ್ವರನೆಂಬ ಹೆಸರಿನಿಂದ